**<u>1 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾ ಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಹುಣಸೂರು.</u>**

**<u>ಸಿ.ಸಿ. ಸಂಖ್ಯೆಃ 15/2025</u>**

**ಫಿರ್ಯಾದಿದಾರರುಃ** ಸರ್ಕಾರದ ಪರ ಬಿಳಿಕೆರೆ ಪೊಲೀಸ್ ಠಾಣೆ
ಹುಣಸೂರು ವೃತ್ತ, ಹುಣಸೂರು.

- ವಿರುದ್ಧ -

**ಆರೋಪಿ/ಗಳು :** ಎ 1. **ಮಹದೇವ,**
ಬಿನ್ ಮಾದೇಗೌಡ,
ವಯಸ್ಸುಃ 38 ವರ್ಷ,
ವಾಸಃ ಚಿಕ್ಕಬೀಜನಹಳ್ಳಿ ಹುಂಡಿ ಗ್ರಾಮ,
ಹುಣಸೂರು ತಾಲ್ಲೂಕು,
ಮೈಸೂರು ಜಿಲ್ಲೆ.

ಎ 2. **ಮಂಜ @ ಮಂಜುನಾಥ ಸಿ ಎಸ್**
ಬಿನ್ ಸ್ವಾಮಿಗೌಡ,
ವಯಸ್ಸುಃ 27 ವರ್ಷ,
ವಾಸಃ ಚಿಕ್ಕಬೀಜನಹಳ್ಳಿ ಹುಂಡಿ ಗ್ರಾಮ,
ಹುಣಸೂರು ತಾಲ್ಲೂಕು,
ಮೈಸೂರು ಜಿಲ್ಲೆ.

ಎ 3. **ಪುಟ್ಟೇಗೌಡ**
ಬಿನ್ ಕರಡಿ ದೊಡ್ಡೇಗೌಡ,
ವಯಸ್ಸುಃ 38 ವರ್ಷ,
ವಾಸಃ ಚಿಕ್ಕಬೀಜನಹಳ್ಳಿ ಹುಂಡಿ ಗ್ರಾಮ,
ಹುಣಸೂರು ತಾಲ್ಲೂಕು,
ಮೈಸೂರು ಜಿಲ್ಲೆ.

## ದೋಷಾರೋಪಣೆ

**ಶ್ರೀಮತಿ. ನಮ್ರತಾ ಎಸ್. ಹೊಸಮಠ, ಬಿ.ಎ., ಎಲ್.ಎಲ್.ಬಿ., 1ನೇ ಅಪರ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,** ಹುಣಸೂರು ಆದ ನಾನು ಆರೋಪಿಗಳಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆಃ

ದಿನಾಂಕ: 18.09.2024 ರಂದು ಸಂಜೆ 04.00 ಗಂಟೆ ಸಮಯದಲ್ಲಿ ಹುಣಸೂರು ತಾಲ್ಲೂಕು, ಬಿಳಿಕೆರೆ ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ ಚಿಕ್ಕಬೀಜನಹಳ್ಳಿ ಹುಂಡಿ ಗ್ರಾಮದ ಸಾಕ್ಷಿ-02 ರವರು ತಮ್ಮ ಬೈಕ್ ನಲ್ಲಿ ಚಿಕ್ಕಬೀಜನಹಳ್ಳಿ - ದಳ್ಳಾಳು ಮಾರ್ಗ ಮಧ್ಯದಲ್ಲಿ ಬಿಳಿಕೆರೆ ಕಡೆಗೆ ತಮ್ಮ ಮಗನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗುತ್ತಿರುವಾಗ 1 ಮತ್ತು 2ನೇ ಆರೋಪಿತರು ಕಾರಿನಲ್ಲಿ ಬಿಳಿಕೆರೆ ಕಡೆಯಿಂದ ಬರುತ್ತಿದ್ದು, 2ನೇ ಆರೋತನು ಕಾರನ್ನು ಓಡಿಸಿಕೊಂಡು ಬಿಳಿಕೆರೆ ಕಡೆಗೆ ಬರುತ್ತಿದ್ದ ಸಾಕ್ಷಿ-1ರವರ ಬೈಕ್ ಹತ್ತಿರ ವೇಗವಾಗಿ ಓಡಿಸಿಕೊಂಡು ಹೋದ ವಿಚಾರವಾಗಿ ಸಾಕ್ಷಿ-1ರವರು ವಾಪಸ್ಸು ಬೈಕ್ ನಲ್ಲಿ ಚಿಕ್ಕಬೀಜನಹಳ್ಳಿ ಹುಂಡಿ ಗೇಟ್‌ಗೆ ಸಂಜೆ 4.30 ಗಂಟೆಗೆ ಬಂದು ಗೇಟ್ ಹತ್ತಿರ ಕಾರು ನಿಲ್ಲಿಸಿಕೊಂಡು ನಿಂತಿದ್ದ 1 ಮತ್ತು 2ನೇ ಆರೋಪಿತರನ್ನು ನೋಡಿ 2ನೇ ಆರೋಪಿತನನ್ನು ನೋಡಿ ನೀನು ನನ್ನ ಬೈಕ್ ಡಿಕ್ಕಿ ಮಾಡುವ ರೀತಿಯಲ್ಲಿ ಬರುತ್ತಿಯಾ ಏಕೆ ಎಂದು ಜೋರಾಗಿ ಮಾತನಾಡಿದಾಗ, ಆರೋಪಿಗಳಾದ ನೀವು ಅಪರಾಧ ಮಾಡುವ ಸಮಾನ ಉದ್ದೇಶದಿಂದ, ಕಾರಿನಿಂದ ಇಳಿದು ಹೇ ಬೋಳಿ ಮಗನೇ ನಿನಗೆ ಯಾಕೆ ನಾವು ಗುದ್ದಿಸುತ್ತೀವಿ ನಾನು ಕಾರನ್ನು ಫಾಸ್ಟ್ ಆಗಿ ಓಡಿಸಿಕೊಂಡು ಬಂದೆ ಎಂದು ಅವಾಚ್ಯ ಶಬ್ದಗಳಿಂದ ಬೈದಿರುತ್ತೀರೆಂದು. ಆ ಮೂಲಕ ಭಾರತೀಯ ನ್ಯಾಯ ಸಂಹಿತೆ ಕಲಂ **352** ಸಹವಾಚಕ ಕಲಂ **3(5)**ರ ರೀತ್ಯಾ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ?

2. ಎರಡನೇಯದಾಗಿ, ಮೇಲ್ಕಂಡ ಸ್ಥಳ, ದಿನಾಂಕ, ಮತ್ತು ಸಮಯದಲ್ಲಿ ಅದೇ ವಿಚಾರಕ್ಕೆ ಸಂಬಂಧಪಟ್ಟಂತೆ, ಆರೋಪಿಗಳಾದ ನೀವು ಅಪರಾಧ ಎಸಗುವ ಉದ್ದೇಶದಿಂದ, 2 ನೇ ಆರೋಪಿಯಾದ ನೀವು ಕೈಯಿಂದ ಸಾಕ್ಷಿ-1 ರವರ ಮೈಕೈಗೆ ಹೊಡೆದು ಸಾಮಾನ್ಯ ಸ್ವರೂಪದ ನೋವುಂಟು ಮಾಡಿರುತ್ತೀರೆಂದು, ಆ ಮೂಲಕ ಭಾರತೀಯ ನ್ಯಾಯ ಸಂಹಿತೆ ಕಲಂ **115(2)** ಸಹವಾಚಕ ಕಲಂ **3(5)**ರ ರೀತ್ಯಾ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ?

3. ಮೂರನೇಯದಾಗಿ, ಮೇಲ್ಕಂಡ ಸ್ಥಳ, ದಿನಾಂಕ, ಮತ್ತು ಸಮಯದಲ್ಲಿ ಅದೇ ವಿಚಾರಕ್ಕೆ ಸಂಬಂಧಪಟ್ಟಂತೆ, ಆರೋಪಿಗಳಾದ ನೀವು ಅಪರಾಧ ಎಸಗುವ ಸುಮಾನ ಉದ್ದೇಶದಿಂದ, 3 ನೇ ಆರೋಪಿಯಾದ ನೀವು ಸಾಕ್ಷಿ -01 ರವರನ್ನು ಹಿಡಿದುಕೊಂಡು ಮುಂದೆ ಹೋಗದಂತೆ ಅಡ್ಡಗಟ್ಟಿ ನಿಲ್ಲಿಸಿಕೊಂಡು ಅಕ್ರಮ ತಡೆಯನ್ನುಂಟು ಮಾಡಿರುತ್ತೀರೆಂದು, ಆ ಮೂಲಕ ಭಾರತೀಯ ನ್ಯಾಯ ಸಂಹಿತೆ ಕಲಂ **126(2)** ಸಹವಾಚಕ ಕಲಂ **3(5)**ರ ರೀತ್ಯಾ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ?

4. ನಾಲ್ಕನೇಯದಾಗಿ, ಮೇಲ್ಕಂಡ ಸ್ಥಳ, ದಿನಾಂಕ, ಮತ್ತು ಸಮಯದಲ್ಲಿ ಅದೇ ವಿಚಾರಕ್ಕೆ ಸಂಬಂಧಪಟ್ಟಂತೆ, ಆರೋಪಿಗಳಾದ ನೀವು ಅಪರಾಧ ಎಸಗುವ ಸಮಾನ ಉದ್ದೇಶದಿಂದ, 1 ನೇ ಆರೋಪಿಯಾದ ನೀವು ದನ ಕಟ್ಟುವ ಗೂಟವನ್ನು ಕಿತ್ತುಕೊಂಡು ಸಾಕ್ಷಿ -01 ರವರ ತಲೆಗೆ ಹೊಡೆದು ಸಾಮಾನ್ಯ ಸ್ವರೂಪದ ನೋವುಂಟು ಮಾಡಿರುತ್ತೀರೆಂದು, ಆ ಮೂಲಕ ಭಾರತೀಯ ನ್ಯಾಯ ಸಂಹಿತೆ ಕಲಂ **118(2)** ಸಹವಾಚಕ ಕಲಂ **3(5)**ರ ರೀತ್ಯಾ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ?

5. ಕೊನೆಯದಾಗಿ, ಮೇಲ್ಕಂಡ ಸ್ಥಳ, ದಿನಾಂಕ, ಮತ್ತು ಸಮಯದಲ್ಲಿ ಅದೇ ವಿಚಾರಕ್ಕೆ ಸಂಬಂಧಪಟ್ಟಂತೆ, ಆರೋಪಿಗಳಾದ ನೀವು ಅಪರಾಧ ಎಸಗುವ

ಸಮಾನ ಉದ್ದೇಶದಿಂದ, 1 ನೇ ಆರೋಪಿಯಾದ ನೀವು ಸಾಕ್ಷಿ - 01 ರವರನ್ನು ನೋಡಿಕೊಂಡು ನಿನ್ನನ್ನು ಸುಮ್ಮನೆ ಬಿಡುವುದಿಲ್ಲ ಎಂದು ಕೊಲೆ ಬೆದರಿಕೆ ಹಾಕಿರುತ್ತೀರೆಂದು, ಆ ಮೂಲಕ ಭಾರತೀಯ ನ್ಯಾಯ ಸಂಹಿತೆ ಕಲಂ. **351(2) (3)** ಸಹವಾಚಕ ಕಲಂ **3(5)**ರ ರೀತ್ಯಾ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ?

(ಮೇಲ್ಕಂಡ ಆಪಾದನೆಗಳು ಈ ನ್ಯಾಯಾಲಯದ ಸಂಜ್ಞೆಯೊಳಗೆ ಬರುತ್ತಿದ್ದು ಹಾಗೂ ಸದರಿ ಆಪಾದನೆಗಳಿಗೆ ಆರೋಪಿಗಳಾದ ನೀವುಗಳು ಈ ನ್ಯಾಯಾಲಯದಲ್ಲಿ ವಿಚಾರಣೆಗೆ ಗುರಿಯಾಗಬೇಕೆಂದು ಈ ಮೂಲಕ ನಿರ್ದೇಶಿಸುತ್ತೇನೆ.)

**(ನಮ್ರುತಾ ಎಸ್. ಹೊಸಮಠ)**

ದಿನಾಂಕ:**13.05.2026** **1 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ.ದಂಡಾಧಿಕಾರಿಗಳು, ಹುಣಸೂರು.**